ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸದಸ್ಯರ ಭಾವನೆಗಳನ್ನು ಅರ್ಥಮಾಡಿಕೊಳ್ಳುತ್ತಿದ್ದೇನೆ. ಇದು ಬೆಂಗಳೂರು ಮಹಾನಗರದಲ್ಲಿ ಬಹಳ ಗಂಭೀರವಾದಂತಹ ಸಮಸ್ಯೆಯಾಗಿದೆ. ಈ ಬಗ್ಗೆ ಪ್ರತಿನಿತ್ಯ ಪತ್ರಿಕೆಗಳಲ್ಲಿ ನೋಡುತ್ತಿದ್ದೇನೆ ಈ ಬಗ್ಗೆ ಸಾರ್ವಜನಿಕರು ಸಹ ಬಹಳಷ್ಟು ಸಲ complaints ಕೊಟ್ಟಿದ್ದಾರೆ. ಈ ಬಗ್ಗೆ ಹೈಕೋರ್ಟಿನಲ್ಲಿ ಒಂದು PIL ನಲ್ಲಿಯೂ ನ್ಯಾಯಾಧೀಶರು direction ಕೊಟ್ಟಿದ್ದಾರೆ. ಆ ದೃಷ್ಟಿಯಿಂದ ಇವತ್ತು ಕೆಲವೊಂದು ಸಂಘ-ಸಂಸ್ಥೆಗಳ ಮುಖಾಂತರ. NGO ಮುಖಾಂತರ ಈ ಒಂದು ಸಂತಾನಹರಣ ಚಿಕಿತ್ಸೆ ಮಾಡುವಂತಹದ್ದನ್ನು ನಾವು ಮಾಡುತ್ತಿದ್ದೇವೆ. ಈಗ ಮಾನ್ಯ ಸದಸ್ಯರಾದ ಶ್ರೀ ಕೃಷ್ಣ ಬೈರೇಗೌಡರು ಹೇಳಿದರು. ಅವರು ಕೊಟ್ಟಂತಹ ಸಂಖ್ಯೆ ಏನು ಇದೆ ಸಂತಾನಹರಣ ಮಾಡಿರುವುದನ್ನು ನೋಡಿದರೆ ಅವರು ಯಾವುದು ಇರಬಾರದು ಎಂದು ಹೇಳುತ್ತಿದ್ದಾರೆ. ಹೀಗಾಗಿ ಈ ಜವಾಬ್ದಾರಿಯನ್ನು ನಾವು NGO ರವರಿಗೆ ಕೊಟ್ಟಿದ್ದೇವೆ. ಅದರ ಬಗ್ಗೆಯೂ ಸಹ ನಾವು ವಿಚಾರಣೆ ಮಾಡುತ್ತೇವೆ. ಎಲ್ಲಿ ಎಷ್ಟು ಸಂತಾನಹರಣ ಚಿಕಿತ್ಸೆಯನ್ನು ಮಾಡಿದ್ದಾರೆ. ನಿಜವಾಗಿಯೂ ಅದು ಆಗಿದೆಯೋ ಇಲ್ಲವೋ ಎನ್ನುವುದು ಇದರ ಬಗ್ಗೆ ಕೂಲುಂಕಷವಾಗಿ ನಾವು ವಿಚಾರಣೆ ಮಾಡುತ್ತೇವೆ. ಇದರಲ್ಲಿ ಯಾರಾದರೂ ತಪ್ಪು ಮಾಡಿದ್ದರೆ definitely ಅವರ ಮೇಲೆ action ತೆಗೆದುಕೊಳ್ಳುತ್ತೇವೆ. ಮುಂದೆ ಬರುವಂತಹ ದಿವಸಗಳಲ್ಲಿ ಇನ್ನೂ ಕಟ್ಟುನಿಟ್ಟಾಗಿ ಈ ಒಂದು ಸಂತಾನ ನಿಯಂತ್ರಣ ಚಿಕಿತ್ಸೆಯನ್ನು ಮಾಡುವಂತಹದ್ದು ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತೇನೆ. ಇದರಿಂದ ಸಾರ್ವಜನಿಕರಿಗೆ ಏನು ತೊಂದರೆಯಾಗುತ್ತಿದೆ ಅದನ್ನು ನಿವಾರಣೆ ಮಾಡುವಂತಹ ನಿಟ್ಟಿನಲ್ಲಿ ಎಲ್ಲಾ ರೀತಿಯಾದ ಉಪಕ್ರಮಗಳನ್ನು ಕೈಗೊಳ್ಳುತ್ತೇವೆ.

ಅಧ್ಯಕ್ಷರು : ಆಯಿತು, ಶ್ರೀ ಹೆಚ್.ಪಿ. ಮಂಜುನಾಥ್ ರವರ ಪ್ರಶ್ನೆ 24 (452) ಈ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ಟೈಮ್ ಕೇಳಿದ್ದಾರೆ.

ಶ್ರೀ ಹೆಚ್.ಪಿ. ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಮಾನ್ಯ ಸಭಾನಾಯಕರು ಉತ್ತರವನ್ನು ಕೊಟ್ಟರೆ ಸಾಕು. ನಾನು ಸಭಾನಾಯಕರಲ್ಲಿ ಮೂರ್ನಾಲ್ಕು ಬಾರಿ ಮನವಿಯನ್ನು ಮಾಡಿದ್ದೇನೆ.

ಅಧ್ಯಕ್ಷರು : ಇದಕ್ಕೆ ಸಂಬಂಧ ಪಟ್ಟ ಮಂತ್ರಿಯವರೆ ಉತ್ತರವನ್ನು ಕೊಡಬೇಕು. 26ನೇ ತಾರೀಖಿನ ದಿವಸ ನಿಮ್ಮ ಪ್ರಶ್ನೆಗೆ ಉತ್ತರವನ್ನು ಕೊಡಿಸುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು): Next week ಉತ್ತರವನ್ನು ಕೊಡಿಸುತ್ತೇನೆ.

ಚುಕ್ಕೆ ಗುರುತಿನ ಪ್ರಶ್ನೆ : 25 (454)

ಮಾನ್ಯ ಸದಸ್ಯರು ಗೈರುಹಾಜರಿದ್ದರು

ಅಧ್ಯಕ್ಷರು : ಶ್ರೀ ರಾಮಲಿಂಗಾ ರೆಡ್ಡಿ ರವರ ಪ್ರಶ್ನೆ ಸಂಖ್ಯೆ : 26 (154) ಇದಕ್ಕೆ ಮಾನ್ಯ ಸಚಿವರು ಸಮಯವನ್ನು ಕೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ 30ನೇ ತಾರೀಖಿನ ದಿವಸ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಇದರಲ್ಲಿ ಮೂರು ಪ್ರಶ್ನೆಗಳು ಇವೆ. ಮೂರರಲ್ಲಿ ಎರಡಕ್ಕೆ ಸುಲಭವಾಗಿ ಉತ್ತರ ಕೊಡಬಹುದಾಗಿತ್ತು. ಎರಡನೇ ಪ್ರಶ್ನೆಗೆ ನಿಮಗೆ ಸ್ವಲ್ಪ ಅಂಕಿಅಂಶಗಳು ಬೇಕಾಗಿತ್ತು. ಈ ಸೆಷನ್ ಒಳಗಾದರೂ ಉತ್ತರವನ್ನು ಕೊಡಿಸಿ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು): Next week ಎಷ್ಟು available ಇದೆ ಅದಕ್ಕೆ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ: ಈ ಸೆಷನ್ ಒಳಗಡೆ ಉತ್ತರವನ್ನು ಕೊಡಿಸಿ.

ಅಧ್ಯಕ್ಷರು : ಆಯಿತು. ಶ್ರೀ ರಮೇಶ್ ಬಂಡಿಸಿದ್ದೇಗೌಡ ಎ.ಬಿ.ರವರ ಪ್ರಶ್ನೆ ಸಂಖ್ಯೆ: 27(447) ಇದಕ್ಕೆ ಮಾನ್ಯ ಕಂದಾಯ ಮಂತ್ರಿಗಳು ಉತ್ತರವನ್ನು ಕೊಡುವ ಬಗ್ಗೆ ಟೈಮ್ ಕೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ 26ನೇ ತಾರೀಖಿನ ದಿವಸ ಉತ್ತರವನ್ನು ಕೊಡಿಸುತ್ತೇನೆ.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟರಾಜು : ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯಲ್ಲಿ ಎಲ್ಲಾ ಕಡೆಯಲ್ಲಿ ಬರಗಾಲ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕಾಗಿ ತಾವು 30ನೇ ತಾರೀಖಿನೊಳಗಡೆ ಉತ್ತರವನ್ನು ಕೊಡಿಸಬೇಕು.

ಅಧ್ಯಕ್ಷರು : ಇಲ್ಲಾ, ಇದಕ್ಕೆ 26ನೇ ತಾರೀಖಿನ ದಿವಸ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಎ. ಮಂಜು : ಇವರು ಪೂಜೆ ಮಾಡಿಸುವುದಕ್ಕಾಗಿ ಸುಮಾರು 17 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಅದೆಲ್ಲಾ ಭಾರಿ ದಂಡ.

ಶ್ರೀ ಸಿ.ಎಸ್. ಪುಟ್ಟರಾಜು : ದಯಮಾಡಿ 26ನೇ ತಾರೀಖು ಉತ್ತರವನ್ನು ಕೊಡಿಸಬೇಕು.

ಅಧ್ಯಕ್ಷರು : ಆಯಿತು, ಶ್ರೀ ತನ್ವೀರ್ ಸೇಠ್‌ರವರ ಪ್ರಶ್ನೆ : 28 (684) ಅದಕ್ಕೂ ಸಹ ಮಾನ್ಯ ಮುಖ್ಯಮಂತ್ರಿಗಳು ಟೈಮ್ ಕೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಇದಕ್ಕೆ ಸ್ವಲ್ಪ ಟೈಮ್ ಬೇಕಾಗಿದೆ. ಈ ಬಗ್ಗೆ ಮಾಹಿತಿಯ ಜಾಸ್ತಿ ತೆಗೆದುಕೊಳ್ಳಬೇಕಾಗಿದೆ. Next weekನಲ್ಲಿ ಉತ್ತರ ಕೊಡುತ್ತೇನೆ.

ಶ್ರೀ ವೈ.ಎನ್. ರುದ್ರೇಶ ಗೌಡ : ಮಾನ್ಯ ಅಧ್ಯಕ್ಷರೆ, ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಕೊಡುವ ಬದಲು ಮುಂದಕ್ಕೆ ಹಾಕುತ್ತಾ ಹೋದರೆ ನಾವು ಇಲ್ಲಿ question ಕೇಳುವುದು ಏಕೆ?

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾನು ನಿಮ್ಮಿಂದ ಉತ್ತರವನ್ನು ಬಯಸುತ್ತಿದ್ದೇನೆ. ತನ್ವೀರ್ ಸೇಠ್‌ರವರು ಕೇಳಿರುವಂತಹ ಪ್ರಶ್ನೆಗೆ ಏತಕ್ಕಾಗಿ ಉತ್ತರವನ್ನು ಕೊಡುತ್ತಿಲ್ಲ. ಅವರು ಏನು ಕೇಳಿದ್ದಾರೆ. ಅಕ್ರಮ ಗಣಿಗಾರಿಕೆ ಕುರಿತು ಲೋಕಾಯುಕ್ತದವರು ನೀಡಿರುವ ವರದಿ–1 ಮತ್ತು ವರದಿ 2ರ ಮೇಲೆ ಸರಕಾರ ಇಲ್ಲಿಯವರೆಗೆ ಕೈಗೊಂಡಿರುವ ಕ್ರಮಗಳೇನು? ಈ ಸದನ ಲೋಕಾಯುಕ್ತ ಕಾಯಿದೆಯನ್ನು ಪಾಸು ಮಾಡಿದೆ. ಈ ಬಗ್ಗೆ ಕೇಳುವ ಹಕ್ಕು ಸದಸ್ಯರುಗಳಿಗೆ ಇದೆ.

ಅಧ್ಯಕ್ಷರು : ಉತ್ತರವನ್ನು ಕೊಡಿಸುತ್ತೇನೆಂದು ಹೇಳಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ : ಇದಕ್ಕೆ ಅವರು ಏತಕ್ಕಾಗಿ ಉತ್ತರವನ್ನು ಕೊಡುತ್ತಿಲ್ಲ. ?

ಅಧ್ಯಕ್ಷರು : 30ನೇ ತಾರೀಖು ಉತ್ತರವನ್ನು ಕೊಡಿಸುತ್ತೇನೆ. ಏತಕ್ಕಾಗಿ ಕೊಡುತ್ತಿಲ್ಲವೆಂದರೆ ಅವರು ಟೈಮ್ ಕೇಳಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ : ಟೈಮ್ ಅಂದರೆ ಏನು ಅಧ್ಯಕ್ಷರೆ? ಸಚಿವ ಸಂಪುಟ ಎನ್ನುವುದು, creation of the House. ನಿಮಗಿಂತ ದೊಡ್ಡವರಲ್ಲಾ ಕ್ಯಾಬಿನೆಟ್? ನಿಮ್ಮ ಅಧೀನ, ಈ ಸದನಕ್ಕೆ ಜನ ವೋಟು ಕೊಟ್ಟಿರುವುದು 224 ಜನ ವೋಟು ಕೊಟ್ಟಿರುವುದು ನಿಮಗೆ, ಇದು ಒಂದು ಭಾಗ ಅಷ್ಟೆ. ನಿಮಗೆ ಉತ್ತರ ಕೊಡಿಸುವಂತಹ ಜವಾಬ್ದಾರಿ ಇದೆ. ಅವರು ಯಾವ ಕಾರಣಕ್ಕಾಗಿ ಉತ್ತರವನ್ನು ಕೊಡುತ್ತಿಲ್ಲ?

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಅವರು ಟೈಮ್ ಕೇಳುವುದಕ್ಕೆ ಎಲ್ಲದಕ್ಕೂ ನಾವು ವಿರೋಧ ಮಾಡುತ್ತೇವೆಂದು ಹೇಳುತ್ತಾ ಇಲ್ಲ. ಯಾವುದೇ ಒಂದು ಪ್ರಶ್ನೆಗೆ ಅಲ್ಲಿರತಕ್ಕಂತಹ ಸಮಯದಲ್ಲಿ ಉತ್ತರವನ್ನು ತರಿಸಿ ಕೊಡುವುದಕ್ಕಾಗುವುದಿಲ್ಲವೆಂದರೆ ಏನಾದರೂ ಸಕಾರಣಗಳು ಸಹ ಇರಬೇಕು. ಉತ್ತರ ಇವತ್ತು ಕೊಡದೆ ಇರಬೇಕಾದರೆ ಏನಾದರೂ ಸಕಾರಣಗಳು ಇರಬೇಕು. ಇನ್ನು information collect ಮಾಡಬೇಕಾಗಿತ್ತು. ಈಗ ಇರುವಂತಹ ಸಮಯ ಸಾಕಾಗಲಿಲ್ಲ. ಈ ತರಹದ್ದು ಏನಾದರೂ ಇದ್ದರೆ ಮಾತ್ರ ಸರ್ಕಾರ ಸಮಯವನ್ನು ಕೇಳಬೇಕೆ ಹೊರತು. ಇಲ್ಲಾ ನಾವು ರೆಡಿ ಇಲ್ಲ. ಉತ್ತರ ಕೊಡುವುದಕ್ಕೆ ಬರವುದಿಲ್ಲ ಎಂದು ಹೇಳುವುದಕ್ಕೆ ಬರುವುದಿಲ್ಲ. ಅದು ಈ ಸದನಕ್ಕೆ ಹಕ್ಕುಚ್ಯುತಿಯಾಗುತ್ತದೆ ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನಿಮಗೆ ಇಂತಹ ಕಾರಣವೆಂದು ಕೊಟ್ಟಿದ್ದಾರಾ? ಇಂತಹ ಕಾರಣಕೋಸ್ಕರ ನಾವು ಎಲ್ಲಾ ಕಡೆಯಿಂದಲೂ information collect ಮಾಡುತ್ತಿದ್ದೇವೆ. ರಾಜ್ಯದ ಹಾಗೂ ದೇಶದ ತುಂಬಾ information collect ಮಾಡುತ್ತಿದ್ದೇವೆ. ಅದಕ್ಕೆ we need some more time ಅದಕ್ಕೋಸ್ಕರ ಎಂದು ಹೇಳಿದ್ದಾರೆಯೇ? ಸುಮ್ಮನೆ ಮುಂದಿನ ವಾರ ಉತ್ತರ ಕೊಡುತ್ತೇವೆಂದರೆ ಏನರ್ಥ? That means to say, this

Government is not serious about this House. ಇದು ಹಾಗೆ ಆಗಬಾರದು. ಇದರ ಬಗ್ಗೆ 2008ರಲ್ಲಿ ಮೊದಲನೇ ರಿಪೋರ್ಟ್ ಕೊಟ್ಟಿರುವುದು. 2ನೇ ರಿಪೋರ್ಟ್ ಕೊಡುವುದಕ್ಕೆ ಒಂದು ವರ್ಷವಾಯಿತು. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೇವೆಂದು ಹೇಳುವುದಕ್ಕೆ ಇವರಿಗೆ ಏನು ಕಷ್ಟ?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು) : ನಾನು ಬಹಳ ಟೈಮ್ ಕೇಳುತ್ತಿಲ್ಲ. ನಾನು next week 26ನೇ ತಾರೀಖಿನವರೆಗೆ ಸಮಯ ಕೇಳಿದ್ದೇನೆ. ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳಿಂದ ಮಾಹಿತಿಯನ್ನು ತೆಗೆದುಕೊಳ್ಳಬೇಕಾಗಿದೆ. ಅದರ ಬಗ್ಗೆ ನಾನು ನನ್ನ ಪತ್ರದಲ್ಲಿ reasoning ಕೊಟ್ಟಿದ್ದೇನೆ. ಅದಕ್ಕಾಗಿ I am seeking only one week's time. Next 30th ಗೆ ಉತ್ತರವನ್ನು ಕೊಡುತ್ತೇನೆ. ಈ ಅಧಿವೇಶನದಲ್ಲಿಯೇ ಉತ್ತರವನ್ನು ಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಕೊಠಡಿಗೆ ಬಂದು ಲೋಕಾಯುಕ್ತ ವರದಿಯ ಬಗ್ಗೆ ಪ್ರಸ್ತಾಪ ಮಾಡುತ್ತೇವೆಂಬ ಬಗ್ಗೆ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ.

ಅಧ್ಯಕ್ಷರು ; ಈ ಬಗ್ಗೆ 30ನೇ ತಾರೀಖು ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಸಿದ್ದರಾಮಯ್ಯ : ಅವತ್ತು 100% ಉತ್ತರ ಕೊಡಿಸುತ್ತೀರಾ ?

ಅಧ್ಯಕ್ಷರು : ಆಯಿತು.

ಶ್ರೀ ಸಿದ್ದರಾಮಯ್ಯ : ಆವತ್ತು ರಿಪೋರ್ಟಿನ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆಂದು ಉತ್ತರವನ್ನು ಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು) : O.K.

ಶ್ರೀ ಸಿದ್ದರಾಮಯ್ಯ : ಆಯಿತು, ಬಿಡಿ

ಅಧ್ಯಕ್ಷರು : ಎ. ಮಂಜುರವರ ಪ್ರಶ್ನೆ ಸಂಖ್ಯೆ : 29 (305) ಇದು ಸಹಕಾರ ಇಲಾಖೆಗೆ ವರ್ಗಾವಣೆಗೊಂಡಿರುತ್ತದೆ. ಇದಕ್ಕೆ ಉತ್ತರವನ್ನು 27ನೇ ತಾರೀಖಿನ ದಿವಸ ಉತ್ತರ ಕೊಡಿಸುತ್ತೇನೆ.

ಶ್ರೀ ಎ. ಮಂಜು : ಮಾನ್ಯ ಅಧ್ಯಕ್ಷರೆ, ನಾನು ಈ ಪ್ರಶ್ನೆಯನ್ನು 3ನೇ ಸಾರಿ ಕೇಳುತ್ತಿದ್ದೇನೆ.. ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಯಡಿಯೂರಪ್ಪನವರ ಕಾಲದಲ್ಲಿ ಶ್ರೀ ಡಿ.ವಿ. ಸದಾನಂದಗೌಡರ ಕಾಲದಲ್ಲಿ ಕೇಳಿದ್ದೆ ಮತ್ತು ಈಗಲೂ ಸಹ ಇದೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಈ ತರಹ ಹಾರಿಕೆಯ ಉತ್ತರವನ್ನು ಕೊಡುವುದು ಬೇಡ. ನನಗೆ ಡೌಟ್ ಆಗಿದೆ. ಇಲ್ಲಿ ಕ್ಲಬ್ ನವರೆ ದೊಡ್ಡವರೋ ಅಥವಾ ಸರ್ಕಾರ ದೊಡ್ಡದೋ ಎಂದು. ಇವರು ಹೇಳಿದ ಹಾಗೆ ಅವರು ಕೇಳುತ್ತಾರೆಯೇ ಅಥವಾ ಅವರು ಹೇಳಿದ ಹಾಗೆ ಇವರು ಕೇಳುತ್ತಾರೆಯೇ ? ಮಾನ್ಯ ಮುಖ್ಯಮಂತ್ರಿಗಳು ಈ ಪ್ರಶ್ನೆಗೆ ಉತ್ತರವನ್ನು ಕೊಡದೆ ಇದ್ದರೆ ಇನ್ನೂ 15 ದಿವಸದಲ್ಲಿ question ಕೇಳುವುದು ಮುಗಿದುಹೋಗುತ್ತದೆ. ಈ ಬಗ್ಗೆ ನಮಗೆ ಗೊತ್ತಾಗುವುದು ಹೇಗೆ? ಹಾಗಾದರೆ ಈ ಕ್ಲಬ್‌ಗೋಸ್ಕರ ಸರ್ಕಾರ ಇದೆಯಂತಾನಾ ?

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, exceptional cases ನಲ್ಲಿ ಉತ್ತರವನ್ನು ಕೊಡುವುದಿಲ್ಲವೆಂದರೆ I can understand ಕಾರಣಗಳು ಇದ್ದರೆ ಕೊಡುವುದಿಲ್ಲವೆಂದರೆ I can understand ಎಲ್ಲದಕ್ಕೂ ಉತ್ತರವನ್ನು ಆಮೇಲೆ ಕೊಡುತ್ತೇವೆಂದರೆ ಉತ್ತರ ಹೇಳವುದಕ್ಕೆ ತಯಾರಿಲ್ಲವೆಂದರೆ ಏನು ಸ್ವಾಮಿ ಹೇಳಿ. ಇಲ್ಲಿ ಮೆಂಬರ್‌ಗಳು ಏತಕ್ಕಾಗಿ ಬರಬೇಕು? ಇಲ್ಲಿ ಸದಸ್ಯರು ಏತಕ್ಕಾಗಿ ಪ್ರಶ್ನೆಗಳನ್ನು ಕೇಳಬೇಕು? ಹಾಗಾದರೆ ಪ್ರಶ್ನೋತ್ತರವರನ್ನು ತಾವು ರದ್ದು ಮಾಡಿಬಿಡಿ. It is a very important function of this House. Very very important ಅವರು ಮಂತ್ರಿಗಳಾಗಿ ಕಲೆಕ್ಟ್ ಮಾಡುವುದಕ್ಕಾಗಲಿಲ್ಲವೆಂದರೆ ಅವರು ಮಂತ್ರಿ ಕೆಲಸವನ್ನು ಬಿಟ್ಟು ಬಿಡಲಿ. ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ : ಇದು ಮೊದಲಲ್ಲಾ, ಇದರ ಬಗ್ಗೆ ಹಿಂದಿನ ಸದನದಲ್ಲಿಯೂ ಪ್ರಸ್ತಾಪವಾಗಿದೆ.

ಶ್ರೀ ಸಿದ್ದರಾಮಯ್ಯ : ಗೌರ್ನಮೆಂಟ್‌ಗೆ ಕೆಲಸವನ್ನು ಮಾಡುವುದಕ್ಕಾಗದಿದ್ದರೆ ಅವರು ಬಿಟ್ಟು ಹೋಗಲಿ. ಅವರು ಏತಕ್ಕಾಗಿ ಇಲ್ಲಿಗೆ ಬರುತ್ತಾರೆ? 'ನಾವು ಏತಕ್ಕಾಗಿ ಇಲ್ಲಿಗೆ ಬರಬೇಕು'? ಮೆಂಬರ್‌ಗಳು ಏತಕ್ಕಾಗಿ

ಪ್ರಶ್ನೆಗಳನ್ನು ಕಳುಹಿಸಬೇಕು'? This type of attitude, this type of laxity, we can't tolerate, ಇದು ಸರಿಯಲ್ಲ. ನೀವು ನಮ್ಮ ರಕ್ಷಣೆಗೆ ಬರಬೇಕು. ಮಾನ್ಯ ಅಧ್ಯಕ್ಷರೆ ನೀವು ಸುಮ್ಮನೆ ಆದರೆ ಆಗುವುದಿಲ್ಲ.

ಅಧ್ಯಕ್ಷರು : ಸಹಕಾರ ಇಲಾಖೆಗೆ ಸಂಬಂಧಪಟ್ಟಂತೆ ತಾವು ಏನಾದರೂ ಹೇಳಿ. ಸಹಕಾರ ಇಲಾಖೆಯ ಮಂತ್ರಿಗಳಿಗೆ ಇದು ವರ್ಗಾವಣೆಯಾಗಿದೆ. ಮಾನ್ಯ ಸಹಕಾರ ಮಂತ್ರಿಗಳೆ, ಪ್ರಶ್ನೆ 305 ನಿಮ್ಮ ಇಲಾಖೆಗೆ ವರ್ಗಾವಣೆಗೊಂಡಿರುತ್ತದೆ.

ಶ್ರೀ ಎ. ಮಂಜು : ಅವರು ಹೊಸದಾಗಿ ಮಂತ್ರಿಯಾಗಿದ್ದಾರೆ. ಪಾಪ, ಅವರಿಗೇನು ಕೇಳುತ್ತೀರಿ ? ಈ ಬಗ್ಗೆ ಅವರಿಗೇನು ಗೊತ್ತಿದೆ ? ಈ ಪ್ರಶ್ನೆಯು ಅವರಿಗೆ ಹೋಗಿರುವುದಿಲ್ಲ.

ಶ್ರೀ ಬಿ.ಜೆ. ಪುಟ್ಟಸ್ವಾಮಿ (ಸಹಕಾರ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಇವತ್ತು ಈ ಪ್ರಶ್ನೆಯನ್ನು ವರ್ಗಾವಣೆ ಮಾಡಿದರೆ ಇದಕ್ಕೆ ಉತ್ತರ ಬರಬೇಕಲ್ಲಾ ? ಇದಕ್ಕೆ ಸಂಬಂಧಪಟ್ಟಂತೆ ಉತ್ತರ ಬಂದಿಲ್ಲ.

ಅಧ್ಯಕ್ಷರು : ಇದಕ್ಕೆ ಸಂಬಂಧಪಟ್ಟಂತೆ ಶುಕ್ರವಾರ ದಿವಸ ಉತ್ತರವನ್ನು ಕೊಡಿಸಿ.

ಶ್ರೀ ಬಿ.ಜೆ. ಪುಟ್ಟಸ್ವಾಮಿ (ಸಹಕಾರ ಮಂತ್ರಿಗಳು) : ಆಯಿತು

ಶ್ರೀ ಎ. ಮಂಜು : ಮಾನ್ಯ ಮಂತ್ರಿಗಳೇ ತಾವು ನನ್ನ ಪ್ರಶ್ನೆ ಏನೆಂದು ಮೊದಲು ತಿಳಿದುಕೊಂಡು ಬಿಡಿ. ಈ ಬಗ್ಗೆ ನಿಮಗೆ ಗೊತ್ತಾಗಿಲ್ಲ. ಇಲ್ಲಿ ನಮ್ಮ ಪ್ರಶ್ನೆ ಸರ್ಕಾರ ಯಾವ ಯಾವ ಕ್ಲಬ್‌ಗಳಿಗೆ ಜಾಗವನ್ನು ಕೊಟ್ಟಿದೆ? ಇದು ಯಾವ ಇಲಾಖೆಗಳಿಗೆ ಹೋಗಿದೆ ಎಂದು ನನ್ನ ಮೊದಲನೆಯ ಪ್ರಶ್ನೆ ಆಗಿದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ನೀವು ಸದಸ್ಯತ್ವ ಕೊಡುವುದು ಬಿಡುವುದು ನಿಮಗೆ ಗೊತ್ತಿರುವುದು.

ಶ್ರೀ ಬಿ.ಜೆ. ಪುಟ್ಟಸ್ವಾಮಿ (ಸಹಕಾರ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಹೇಳುವುದಕ್ಕೆ ನನಗೆ ಪ್ರಶ್ನೆಯೇ ಬಂದಿಲ್ಲ ಮತ್ತು ಉತ್ತರ ಬಂದಿರುವುದಿಲ್ಲ. ನಾಳೆ ನಾನು ಉತ್ತರವನ್ನು ಕೊಡಿಸುತ್ತೇನೆ. ನಾನು ಅದನ್ನು ತಮಗೆ ಒಂದು ಪತ್ರ ಬರೆದೂ

ಕೇಳಿದ್ದೇನೆ. ರೆವಿನ್ಯೂ ಸಂಸ್ಥೆಯೂ, ನಮ್ಮ ಸಂಸ್ಥೆಯೂ ಎರಡೂ ನಮ್ಮ department ಗೆ club ಆಗಿರುವುದರಿಂದ Revenue Department ಗೆ ಉತ್ತರ ಕೇಳಿದ್ದೇನೆ. ಅದು ಬಂದ ತಕ್ಷಣ ಹೇಳುತ್ತೇನೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ (ಶಿರಾ) : ಮಾನ್ಯ ಮುಖ್ಯಮಂತ್ರಿಗಳಿಗೆ, ಸಭಾನಾಯಕರಿಗೆ ಪ್ರಶ್ನೆ ಕೇಳಿರತಕ್ಕಂಥದ್ದು, ಆ ಮಂತ್ರಿ, ಈ ಮಂತ್ರಿ, ಆ ಇಲಾಖೆ ಎನ್ನುವ ಪ್ರಶ್ನೆ ಅಲ್ಲ. Chief Minister is the Leader of this House. Leader ಗೆ ಪ್ರಶ್ನೆ ಕೇಳಿದ್ದೇವೆ. ಉತ್ತರ ಕೊಡುವುದಿಲ್ಲವೆಂದರೆ ಹೇಗೆ ?

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಮಾನ್ಯ ಜಯಚಂದ್ರರವರೆ, ನಾವು ಉತ್ತರ ಕೊಡುವುದಕ್ಕೆ ಹಿಂಜರಿಯುವುದಿಲ್ಲ.

(ಗೊಂದಲ)

ಅಧ್ಯಕ್ಷರು : ನಿಮ್ಮ ಇಲಾಖೆಗೆ 23 ರಂದು ಪ್ರಶ್ನೆ ಹೋಗಿದೆ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಇದು Revenue Department ಗೆ ಬರುತ್ತದೆ. Revenue Department ಗೆ transfer ಮಾಡಿದ್ದೇವೆ.

(ಗೊಂದಲ)

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೆ, ಈ ಜಾಗಗಳನ್ನು ಕೊಡುವುದು ಸರ್ಕಾರ. ಮಹಾನಗರ ಪಾಲಿಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ. ಇದಕ್ಕೆ ಉತ್ತರ ಕೊಡಲು ಸಾಧ್ಯವಿಲ್ಲವೆಂದರೆ ಹೇಗೆ ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರಶ್ನೆ ಕೇಳಲಾಗಿದೆ ಅಂದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು.

(ಗೊಂದಲ)

ಅಧ್ಯಕ್ಷರು : 23ನೇ ತಾರೀಖಿನಂದು ಸಹಕಾರ ಇಲಾಖೆಗೆ ಪ್ರಶ್ನೆ ವರ್ಗಾವಣೆಯಾಗಿದೆ. ಅವರು ಉತ್ತರ ಕೊಡಬೇಕು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಜಯಚಂದ್ರರವರೆ, ಇವೆಲ್ಲಾ ಸಂಸ್ಥೆಗಳೂ co-operative society ಅಧೀನದೊಳಗೆ ಬರುತ್ತಿರುವುದರಿಂದ ...

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : No, No, ಮಹಾನಗರಪಾಲಿಕೆ ಎಂದರೆ ಯಾರಿಗೆ ಬರುತ್ತದೆ ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇಲ್ಲ, ಇವೆಲ್ಲಾ ಸಂಘ ಸಂಸ್ಥೆಗಳು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಸಂಘ–ಸಂಸ್ಥೆಗಳಿಗೆ ಜಾಗ ಯಾರದ್ದು ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : Society ಯೊಳಗೆ registration ಆಗಿರುವಂತಹ ಸಂಸ್ಥೆಗಳು, ಸಹಕಾರ ವ್ಯಾಪ್ತಿಯೊಳಗೆ ಬರುವುದರಿಂದ ಅವರು ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : interpret ಮಾಡಬೇಕಾದರೆ ಬೇರೆ ರೀತಿ interpret ಮಾಡಬಹುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : No, next time ಉತ್ತರ ಕೊಡುತ್ತೇವೆಂದು ಅವರು ಹೇಳುತ್ತಿದ್ದಾರಲ್ಲಾ ?

(ಗೊಂದಲ)

ಶ್ರೀ ಎ. ಮಂಜು : ಮಾನ್ಯ ಅಧ್ಯಕ್ಷರೆ, ಇದರಲ್ಲಿ ನಿಜವಾಗಿಯೂ ಸರ್ಕಾರಕ್ಕೆ ಆಸಕ್ತಿ ಇಲ್ಲ.

(ಗೊಂದಲ)

ಅಧ್ಯಕ್ಷರು : ಈಗ ಉತ್ತರ ಇಲ್ಲದೇ ನೀವು ಏನೇ ಕೇಳಿದರು

(ಗೊಂದಲ)

ಶ್ರೀ ಎ. ಮಂಜು : ಅಲ್ಲ ನಮ್ಮ ಕಳಕಳಿ ಏನೆಂದರೆ ನಿನ್ನೆ Cricket club ಗೆ ಹೋಗಿದ್ದೆ ಅಲ್ಲಿ, ಪಂಚೆ, ಚಪ್ಪಲಿ ಹಾಕಿಕೊಂಡವರು ಯಾರೂ ಬರಬಾರದು ಎಂದು ಬೋರ್ಡ್ ಹಾಕಿದ್ದಾರೆ. ಇದರಿಂದ ನಮಗೆ ಎಷ್ಟು ಅವಮಾನವಾಗಿದೆ ಎಂದು ತಮಗೆ ಅರ್ಥವಾಗುವುದಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇದು ಇವತ್ತು question ನಲ್ಲಿ list ಆಗಿದೆ. ಇದರಲ್ಲಿ ನೀವು ಕೊಟ್ಟಿರತಕ್ಕಂಥ ಉತ್ತರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ ಎಂದು ಮಾಡಿದ್ದಾರೆ. ಈ ರೀತಿ ಮಾಡಿಸಿದವರು ಯಾರು? ನಿಮ್ಮ Legislature Secretariat ಮೊದಲನೆಯದಾಗಿ, ನಿಮ್ಮಲ್ಲಿ ದೋಷ ಇರಬೇಕು ಅಥವಾ ಅವರಲ್ಲಿ ದೋಷ ಇರಬೇಕು. ಎರಡನೆಯದಾಗಿ, ಇಂಥವುಗಳಿಗೆಲ್ಲಾ Co-operative Minister ರವರು ಉತ್ತರ ಕೊಡಿ ಎಂದರೆ ಹೇಗೆ ? ಬೆಂಗಳೂರು ನಗರದಲ್ಲಿರುವಂತಹ club ಗಳು .....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ ....

ಶ್ರೀ ಸಿದ್ದರಾಮಯ್ಯ : ತಾವು ಆನಂತರ ಒಟ್ಟಿಗೆ ಉತ್ತರ ಕೊಡಿ.

ಶ್ರೀ ಜಗದೀಶ್ ಶೆಟ್ಟರ್ : ಒಂದು ನಿಮಿಷ ತಮಗೆ clarification ಮಾಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ಯಾವಾಗ ಆಸ್ತಿತ್ವಕ್ಕೆ ಬಂದಿದೆ ಎನ್ನುವುದು ತಮಗೆಲ್ಲಾ ಗೊತ್ತಿರುವಂಥದ್ದು, ಹಿಂದಿನ ಮುಖ್ಯಮಂತ್ರಿಗಳ, ಅವರ ವ್ಯಾಪ್ತಿಯಲ್ಲಿ ಈ ಸಹಕಾರ ಇಲಾಖೆ ಬರುತ್ತಿತ್ತು. ಹೀಗಾಗಿ ಅವತ್ತು ನೇರವಾಗಿ ನಮ್ಮ ಶಾಸಕರು ಪ್ರಶ್ನೆ ಹಾಕಿದಂತಹ ಸಂದರ್ಭದಲ್ಲಿ ಆ ಇಲಾಖೆ ಹಿಂದಿನ ಮುಖ್ಯಮಂತ್ರಿಗಳ ವ್ಯಾಪ್ತಿಯಲ್ಲಿ ಬರುತ್ತಿತ್ತು. ನಂತರ ನನ್ನ ಕಡೆ ಇರುವಂತಹ ಇಲಾಖೆಯನ್ನು ನಾನು ಬೇರೆ ಮಂತ್ರಿಯವರಿಗೆ ಕೊಟ್ಟಿರುವುದರಿಂದ ಈ ರೀತಿ ಆಗಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ ...

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇದು ಸ್ಪಷ್ಟೀಕರಣ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನೀವು Question ಹಾಕಿ ಎಷ್ಟು ವರ್ಷ ಎಷ್ಟು ದಿನ ಆಯಿತು ? ನೀವು ಇವರಿಗೆ refer ಮಾಡಿ ಎಷ್ಟು ದಿನ ಆಯಿತು ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಅದನ್ನು ಅವರಿಗೆ ಕೇಳಿ.

(ಗೊಂದಲ)

ಶ್ರೀ ಎ. ಮಂಜು : 2–3 ಬಾರಿ ಉತ್ತರ ಕೇಳಿದ್ದೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : List ಹಾಕಿ print ಮಾಡುವಾಗ ಗೊತ್ತಾಗಲಿಲ್ಲವೇ ? ಇದಕ್ಕೆ ಯಾರು ಜವಾಬ್ದಾರರು ? ಮಾನ್ಯ ಸದಸ್ಯರು 2–3 ಬಾರಿ ಉತ್ತರ ಕೇಳಿದ್ದೇನೆ ಎಂದು ಹೇಳುತ್ತಿದ್ದಾರೆ. That means to say, deliberately the Government is avoiding.

(ಗೊಂದಲ)

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೆ...,

(ಗೊಂದಲ)

ಶ್ರೀ ಸಿದ್ದರಾಮಯ್ಯ : ತಾವು ಬೆಂಗಳೂರಿಗೆ incharge Minister ಇದ್ದೀರಿ ತಾವು ಇದಕ್ಕೆ ಉತ್ತರ ಕೊಡಿ.

ಶ್ರೀ ಆರ್. ಅಶೋಕ್ : ನಾಮನಿರ್ದೇಶನ ಮಾಡುವಂಥದ್ದು, ಕೇಳಿದ್ದಾರೆ. ಅದರಲ್ಲಿ ತಡೆಹಿಡಿಯುವುದು ಏನಿದೆ? ನಾಳೆ ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾಳೆ ಏಕೆ? ಇವತ್ತು ಏಕೆ ಉತ್ತರ ಕೊಡುವುದಿಲ್ಲ? ನಾಳೆ ಉತ್ತರ ಕೊಡುವುದಾದರೆ ಇವತ್ತು ನೀವು ಏಕೆ ಲಿಸ್ಟ್ ಹಾಕಿದಿರಿ? ನಮ್ಮ ಪ್ರಶ್ನೆಗೆ ಉತ್ತರ ನೀಡದಿದ್ದರೆ ಏಕೆ ಬಂದು ಕುಳಿತಿದ್ದೀರಿ?

(ಗೊಂದಲ)

ಶ್ರೀ ಆರ್. ಅಶೋಕ್ : ಪ್ರಶ್ನೆ ಬೇರೆಯವರಿಗೆ transfer ಆಗಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನೀವು ಆ ರೀತಿ ಮಾಡಲು ಬರುವುದಿಲ್ಲ. That is not the reply. ನೀವು ಈ ರೀತಿ ಉತ್ತರ ಹೇಳುವುದು ಸರಿಯಿಲ್ಲ.

(ಗೊಂದಲ)

ಶ್ರೀ ಎ. ಮಂಜು : ಮಾನ್ಯ ಅಧ್ಯಕ್ಷರೆ, ಇಲ್ಲಿ ವರ್ಗಾವಣೆ ಮಾಡಿರುವಂಥದ್ದೇ ತಪ್ಪು. ನಾನು ಕೇಳಿರುವ ಪ್ರಶ್ನೆ ಏನೆಂದರೆ, ಇವುಗಳಲ್ಲಿ ಎಲ್ಲೆಲ್ಲಿ ಎಷ್ಟು ವಿಸ್ತೀರ್ಣದ ಜಾಗವನ್ನು ನೀಡಲಾಗಿದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ಇದು ಹೇಗೆ Co-operation Department ಗೆ ಬರುತ್ತದೆ ? ಯಾರು ಹೇಳಿದವರು? ಮಂತ್ರಿಗಳು ಏಕೆ ಸುಳ್ಳು ಹೇಳುತ್ತಾರೆ? ನಾನು ಎರಡು ಪ್ರಶ್ನೆಗಳನ್ನು ಕೇಳಿದ್ದೇನೆ. ನಾಮನಿರ್ದೇಶನವೇ ಬೇರೆ. land ಕೊಟ್ಟಿರುವುದೇ ಬೇರೆ. ದಯವಿಟ್ಟು ಅವರಿಗೆ ಸರಿಯಾಗಿ ಓದಿಕೊಳ್ಳಲು ಹೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಜಾಗವನ್ನು Co-operation Minister ರವರು ಕೊಡುತ್ತಾರೆಯೇ?

(ಗೊಂದಲ)

ಅಧ್ಯಕ್ಷರು : ಉತ್ತರವನ್ನು 26 ರಂದು ಕೊಡಿಸೋಣ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಇದು ಸಭೆಯ ಒಂದು ಘನತೆಯ ಪ್ರಶ್ನೆ. Print ಆಗಿ ಬಂದ ಮೇಲೆ ಉತ್ತರ ಕೊಡಬೇಕಾಗಿರತಕ್ಕಂಥದ್ದು, ಸರ್ಕಾರದ ಧರ್ಮ, ಕರ್ತವ್ಯ It is the responsibility ತಾವು ತೀರ್ಪು ಕೊಟ್ಟುಬಿಡಿ. ಈ ಸಭೆಗೆ ಸರಿಸಮಾನವಾದದ್ದು. ಮಂತ್ರಿಮಂಡಲ ಎಂದು ತಾವು ಹೇಳಿಬಿಡಿ. ನಾವು ಕೇಳುವುದಕ್ಕೇ ಹೋಗುವುದಿಲ್ಲ. ಅದನ್ನು ಮಾಡುವುದಕ್ಕಾಗುತ್ತದೆಯೇ? They are under you ಆ ಕಾರಣಕ್ಕೋಸ್ಕರ ಮಾನ್ಯ ಅಧ್ಯಕ್ಷರೆ, ತಮ್ಮನ್ನು ಎತ್ತರವಾದಂತಹ ಜಾಗದಲ್ಲಿ ಕೂರಿಸಿರುವುದು. ನಾವೆಲ್ಲಾ ಕೆಳಗೆ ಕುಳಿತಿದ್ದೇವೆ.

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಹಾಗೂ ರೇಷ್ಮೆ ಸಚಿವರು): ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಮಂತ್ರಿಗಳಿಗೆ ವರ್ಗಾವಣೆ ಮಾಡಿರುವುದು ಬೇಕಾದಷ್ಟು ನಿದರ್ಶನಗಳಿವೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಇವರಿಗೆ ಸಭೆಯ ನಡವಳಿಕೆ ಮಾಡುವುದಕ್ಕೆ ಬರುವುದಿಲ್ಲವೆಂದರೆ ಏನು ? 4 ವರ್ಷ ಆಯಿತು ? 5 ವರ್ಷದಲ್ಲಿ ಇನ್ನೂ ಉತ್ತರ ಕೊಡಲು ರೀತಿ ನೀತಿ ಗೊತ್ತಿಲ್ಲವೆಂದರೆ ಹೇಗೆ ಮಾನ್ಯ ಅಧ್ಯಕ್ಷರೆ?

(ಗೊಂದಲ)

ಅಧ್ಯಕ್ಷರು : ಮಧ್ಯದಲ್ಲಿ ಬದಲಾವಣೆಗಳಾದವು ಅದಕ್ಕೆ ಸ್ವಲ್ಪ ವ್ಯತ್ಯಾಸವಾಗಿದೆ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಮೊದಲು Co-operation Department ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಇತ್ತು. ಅದಕ್ಕೋಸ್ಕರ ಅದು ಅಲ್ಲಿಗೆ refer ಆಗಿದೆ. Next ನನಗೆ ಬರುತ್ತದೆ. ಅದಕ್ಕೆ ಉತ್ತರ ಹೇಳುತ್ತೇನೆ. Portfolio change ಆಗಿರುವುದರಿಂದ ಸ್ವಲ್ಪ problem ಆಗಿದೆ ಈ ರೀತಿ Transfer ಮಾಡುವುದು ಪ್ರತಿ ಬಾರಿಯೂ ಆಗಿದೆ. ಇದೇನೂ ಮೊದಲಲ್ಲ. ಬಹಳ ಸಾರಿ ಆಗಿದೆ. Next ಉತ್ತರ ಹೇಳುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇವರ ಜಗಳದಲ್ಲಿ ಸರ್ಕಾರ ನಡೆಸುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ನೋಡಿ ನೋಡಿ, ಯಾವುದೋ ಸಣ್ಣ ವಿಚಾರಕ್ಕೆ ಸರ್ಕಾರಕ್ಕೂ ಇದಕ್ಕೂ ಏನು ಸಂಬಂಧ ಇದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಹೌದು, ಈ questions ನಲ್ಲಿ list ಮಾಡಿ ಉತ್ತರವಿಲ್ಲವೆಂದರೆ ಏನು ?

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಎಷ್ಟೋ ಬಾರಿ postpone ಆಗಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಎಷ್ಟೋ ಬಾರಿ ಅಲ್ಲ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : Department ಗಳದ್ದು ವರ್ಗಾವಣೆ ಆದಾಗ ಈ ರೀತಿ ಆಗುತ್ತದೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : Club ಗಳಿಗೆ ಜಾಗ ಕೊಡುವವರು ನೀವಾ?

(ಗೊಂದಲ)

ಅಧ್ಯಕ್ಷರು : ಆಯಿತು, ಮುಕ್ತಾಯ ಮಾಡೋಣ. 26ಕ್ಕೆ ಉತ್ತರ ಕೊಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : It is the Chief Minister. No No ಈ ರೀತಿಯಾದರೆ ನಾವು Assembly ಗೆ ಬರಬೇಕಾದ ಅಗತ್ಯವಿಲ್ಲ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : Portfolio ಬದಲಾವಣೆಯಿಂದ ಆಗಿದೆ ಎಂದು ಹೇಳಿದ್ದೇವೆ. ಯಾವ ಹಿನ್ನಲೆಯಿಂದಲೂ ಇದು ಆಗಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : Next week answer ಕೊಡಿಸುತ್ತೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಈ ರೀತಿ ಜವಾಬ್ದಾರಿ ಇಲ್ಲದೆ ಉತ್ತರಗಳು ಬಂದರೆ ನಾವು ಏಕೆ ಬರಬೇಕು? ಉತ್ತರ ಏಕೆ ಕೇಳಬೇಕು? ಮತ್ತೆ ಯಾರಿಂದ ನಾವು ಕೇಳಬೇಕು? The Government is answerable,

accountable to this House. It is the basic duty of the Government.

(ಗೊಂದಲ)

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ದರಾಮಯ್ಯನವರು ಏನು ಕೋಪ ಮಾಡಿಕೊಳ್ಳುವುದು ಬೇಡ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಕೋಪ ಏನೂ ಇಲ್ಲ. ಬಿ.ಪಿ. ಇದೆ ಮಾನ್ಯ ಅಶೋಕ್‌ರವರೆ ದಯಮಾಡಿ ಉತ್ತರ ಕೊಡಿ.

(ಗೊಂದಲ)

ಶ್ರೀ ಅಶೋಕ್ : ಅವರು ಕೋಪ ಮಾಡಿಕೊಳ್ಳುವುದು ಬೇಡ. ಅವರೂ ಸರ್ಕಾರ ನಡೆಸುವಾಗ ಇಂತಹ ನೂರಾರು ಪ್ರಶ್ನೆಗಳು ಬಂದಿವೆ. ನಾವೇ Opposition ನಲ್ಲಿ ಕುಳಿತಿದ್ದೆವು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾನು Minister ಆಗಿರುವಾಗ ಈ ರೀತಿ ಆಗಿರುವುದು ಒಂದು ದಿನವಾದರೂ ತೆಗೆದು ತೋರಿಸಿ.

(ಗೊಂದಲ)

ಶ್ರೀ ಆರ್. ಅಶೋಕ್ : ನಾವು ಅಲ್ಲಿ ಕುಳಿತಿದ್ದಾಗ, ನೀವು ಇಲ್ಲಿ ಕುಳಿತಿದ್ದಾಗ ಇಂತಹ ನೂರಾರು ನೋಡಿದ್ದೇವೆ. ಸದನದಲ್ಲಿ ನೀವು ಉತ್ತರವನ್ನೇ ಕೊಡಲಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಯಾರೂ ನಾನಾ?

ಶ್ರೀ ಆರ್. ಅಶೋಕ್ : ನೀವಲ್ಲ ಸಾರ್, ನಿಮ್ಮ ಸರ್ಕಾರ ಉತ್ತರವನ್ನೇ ಕೊಟ್ಟಿರಲಿಲ್ಲ. ಆ session ನಲ್ಲಿಯೂ ಕೊಡಲಿಲ್ಲ. ಮುಂದಿನ session ಗಳಲ್ಲೂ ನಾವು ಕೇಳಲಿಲ್ಲ Lapse ಆಯಿತು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಈ ರೀತಿ ಆರೋಪ ಮಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : This is not the way.

(ಗೊಂದಲ)

ಅಧ್ಯಕ್ಷರು : ಆಯಿತು please ಇದನ್ನು ಮುಕ್ತಾಯ ಮಾಡೋಣ. 26ಕ್ಕೆ ಉತ್ತರ ಕೊಡಿಸುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಸುಮ್ಮನೆ ನೀವು ರಾಜಿನಾಮೆ ಕೊಟ್ಟು ಹೋಗಿ, ಜನರಿಗೆ ಏಕೆ ತೊಂದರೆ ಮಾಡುತ್ತೀರಾ ?

(ಗೊಂದಲ)

ಶ್ರೀ ಆರ್. ಅಶೋಕ್ : ಸಾರ್, ನೀವೂ ಗೆದ್ದು ಬನ್ನಿ, ರಾಜಿನಾಮೆ ಕೊಟ್ಟುಬಿಡುತ್ತೇನೆ. ನೀವು ಗೆದ್ದು ಬಂದಾಗ ರಾಜೀನಾಮೆ ಕೊಡುತ್ತೇವೆ, ಈಗ ತಾವು ಗೆದ್ದಿಲ್ಲ ಅಲ್ಲವೇ ? ಬಿಡಿ, ಗೆದ್ದು ಬಂದಾಗ ನೋಡೋಣ ಈಗ ಏಕೆ? ಜನ ಆಯ್ಕೆ ಮಾಡುವವರು. ನಾವಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ ಸರ್ಕಾರ ನಡೆಸುವುದಕ್ಕೆ ಆಗದೇ ಇದ್ದ ಮೇಲೆ. Please give a direction to them to please resign and go.

(ಗೊಂದಲ)

ಶ್ರೀ ಆರ್. ಅಶೋಕ್ : ಅವರ ಹೇಳಿದ್ದಕ್ಕೇನು ನಾವೇನೂ ಕುಳಿತುಕೊಂಡಿಲ್ಲ. ಜನ ಹೇಳಿರುವುದಕ್ಕೆ ಕುಳಿತುಕೊಂಡಿದ್ದೇವೆ ಅಷ್ಟೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಜನ ನಿಮಗೆ ಹೇಳುತ್ತಾರೆ, ಜನ ನಿಮಗೆ ಈ ರೀತಿ ಮಾಡಿ ಎಂದು ಹೇಳಿದ್ದಾರಾ? ಎಲ್ಲಿದೆ ಸರ್ಕಾರ?

(ಗೊಂದಲ)

ಅಧ್ಯಕ್ಷರು : ಇದನ್ನು ಮುಕ್ತಾಯ ಮಾಡೋಣ.

ಶ್ರೀ ಸಿದ್ದರಾಮಯ್ಯ : This is a great opportunity to give a direction. Ask them to resign.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ತಾವು serious ಆಗಿ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಎ. ಮಂಜು : ಮಾನ್ಯ ಅಧ್ಯಕ್ಷರೆ, ನಾನು ಮೂರು ಬಾರಿ ಪ್ರಶ್ನೆ ಕೇಳಿದ್ದೇನೆ.

(ಗೊಂದಲ)

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಕಳೆದ 4 ವರ್ಷಗಳಲ್ಲಿ ನಮ್ಮ ಸರ್ಕಾರ ಪ್ರಾರಂಭವಾದ ದಿನಗಳಿಂದಲೂ ಬಿದ್ದು ಹೋಗುತ್ತೀರಾ. ಬಿದ್ದು ಹೋಗುತ್ತೀರಾ ಎಂದು ಹೇಳುತ್ತಿದ್ದಾರೆ. ಮಾನ್ಯ ಜೆ.ಹೆಚ್. ಪಟೇಲ್‌ರವರು ಹೇಳಿದ ಕಥೆ ರೀತಿ ಆಗುತ್ತಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : 3 ಜನ Chief Minister ಇಬ್ಬರು Deputy Chief Minister ಎಂದು ಈಗ ಮಾಡಿಕೊಂಡಿದ್ದಾರೆ. ಇವರು ಇನ್ನೂ ಇಬ್ಬರು Deputy Chief Minister ಮಾಡಿಕೊಳ್ಳುವುದು ಒಳ್ಳೆಯದು.

(ಗೊಂದಲ)

ಶ್ರೀ ಆರ್. ಅಶೋಕ್ : ಕಾಂಗ್ರೆಸ್‌ನಲ್ಲಿ ಇನ್ನೂ ಬಹಳ ಜನ ಇದ್ದರು. ಸಾರ್. ವೀರೇಂದ್ರ ಪಾಟೀಲ್‌ರವರು. ವೀರಪ್ಪ ಮೊಯಿಲಿಯವರು. ಬಂಗಾರಪ್ಪನವರು ಎಲ್ಲರೂ ಇದ್ದಾರೆ. ಬಂಗಾರಪ್ಪನವರನ್ನೂ ಸೇರಿಸಿ ಮೂರು ಜನ ಮುಖ್ಯಮಂತ್ರಿಗಳು ಇದ್ದರು.

(ಗೊಂದಲ)

ಶ್ರೀ ಸಿದ್ದರಾಮಯ್ಯ ; ಅವರೆಲ್ಲಾ ಮಾಡಿರುವುದನ್ನು ನೀವು ಮಾಡಲು ಇಲ್ಲಿಗೆ ಬಂದಿದ್ದೀರಾ ? ನಾವು ವಿಭಿನ್ನವಾದಂಥ ಸರ್ಕಾರ ತರುತ್ತೇವೆ ಎಂದು ಹೇಳಿ ...

(ಗೊಂದಲ)

ಅಧ್ಯಕ್ಷರು : 26ಕ್ಕೆ ನೀವೇ ಹೇಳಿ.

(ಗೊಂದಲ)

ಶ್ರೀ ಆರ್. ಅಶೋಕ್ : ಸಾರ್, ಇದು ಎರಡೂ ಇಲಾಖೆಗೆ ಸಂಬಂಧಪಟ್ಟದ್ದು ಆಗಿರುತ್ತದೆ. ಅದಕ್ಕೋಸ್ಕರ ಈಗ ಸಹಕಾರ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ನಗರಾಭಿವೃದ್ಧಿ ಇಲಾಖೆಯಿಂದ ಏನೇನು ಮಾಹಿತಿ ಬೇಕೋ ಅದನ್ನು ತರಿಸಿಕೊಳ್ಳುತ್ತಾರೆ. Nomination ಮಾಡತಕ್ಕಂಥದ್ದು ಸಹಕಾರ ಇಲಾಖೆಗೆ ಬರುತ್ತದೆ. ಅದನ್ನು ಚರ್ಚೆ ಮಾಡಿಕೊಡುತ್ತಾರೆ.

(ಗೊಂದಲ)

ಅಧ್ಯಕ್ಷರು : ಅವರಿಗೆ ಮಾಹಿತಿ ತಂದುಕೊಡಿ

(ಗೊಂದಲ)

ಶ್ರೀ ಎ. ಮಂಜು : ಮಾನ್ಯ ಅಧ್ಯಕ್ಷರೆ, ...

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ 26 ಕ್ಕೆ ನೀವು ಮಾತನಾಡಿ. ಉತ್ತರ ಇಲ್ಲದೇ ಏನು ಮಾತನಾಡುತ್ತೀರಿ ?

ಅಧ್ಯಕ್ಷರು : 26ನೇ ತಾರೀಖಿನ ದಿವಸ ನೀವು ಮಾತನಾಡಿ. ಈಗ ಉತ್ತರ ಇಲ್ಲದಿದ್ದರೆ ನೀವು ಏನು ಮಾತನಾಡುತ್ತೀರಿ? ನಾನು ಸರ್ಕಾರದಿಂದ 26ನೇ ತಾರೀಖಿನ ದಿವಸ ಉತ್ತರವನ್ನು ಕೊಡಿಸುತ್ತೇನೆ. ನೀವು ಮತ್ತೆ ಮತ್ತೆ ಮಾತನಾಡುತ್ತೀರಲ್ಲಾ? ನಾನು ಇದ್ಯಾವುದು ದಾಖಲೆಗೆ ಹೋಗಬಾರದು ಎಂದು ಹೇಳುತ್ತಿದ್ದೇನೆ.

ಶ್ರೀ ಎ. ಮಂಜು : ಮಾನ್ಯ ಅಧ್ಯಕ್ಷರೆ, ನಾನು ಈ ವಿಚಾರದ ಬಗ್ಗೆ ಮಾತನಾಡುತ್ತೇನೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡುತ್ತಾರೆಂಬ ಬಗ್ಗೆ ತಾವು ಕೇಳಬೇಕು.

ಅಧ್ಯಕ್ಷರು : ಈಗ ಉತ್ತರ ಇಲ್ಲವಲ್ಲಾ ?

ಶ್ರೀ ಸಿದ್ದರಾಮಯ್ಯ : ಮಾನ್ಯ ಸಚಿವರು 26ನೇ ತಾರೀಖಿನ ದಿವಸ ಉತ್ತರವನ್ನು ಕೊಡುವಾಗ ಇದಕ್ಕೆ ಸಂಬಂಧಿಸಿದಂತೆ ಏನು ಮಾಡಬೇಕೆಂಬುದರ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಾರೆ.

ಅಧ್ಯಕ್ಷರು : ಆಯಿತು, ಎ. ಮಂಜುರವರೆ ತಾವು ಹೇಳಿ.

ಶ್ರೀ ಎ. ಮಂಜು : ಈ ವಿಷಯವನ್ನು ನಾನು ಏತಕ್ಕಾಗಿ ಸೀರಿಯಸ್ಸಾಗಿ ತೆಗೆದುಕೊಂಡಿದ್ದಿದೇವೆಂದರೆ. ನಾವೆಲ್ಲರೂ ಈ ಸದನದ ಸದಸ್ಯರಾಗಿದ್ದೇವೆ. ಅವರಿಗೆ ಸರ್ಕಾರವು ಜಾಗವನ್ನು ಕೊಡುತ್ತದೆ. We are not entitled to use the club. All officers and IAS/IPS officers & will enter there. We are not allowed to enter. ಇದರ ಜೊತೆಗೆ ಅಲ್ಲಿ ಕಚ್ಚೆ ಹಾಕಿರುವವರು. ಚಪ್ಪಲಿ ಹಾಕಿಕೊಂಡಿರುವವರು ಅವರಿಗೆ ಪ್ರವೇಶವಿಲ್ಲವೆಂದು ಅವರು ಅಲ್ಲಿ ಬೋರ್ಡ್ ಅನ್ನು ಹಾಕಿಕೊಂಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಹಾಗೂ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಹೆಚ್.ಡಿ. ದೇವೇಗೌಡರೂ ಸಹ ಆಲ್ಲಿಗೆ ಹೋಗುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅವರಿಗೆ ಜಾಗವನ್ನು ಸರ್ಕಾರ ಕೊಟ್ಟಿರುವುದು, ಆದರೆ ಅಲ್ಲಿಗೆ ಪಂಚೆ ಹಾಕಿಕೊಂಡಿರುವವರು ಹೋಗಬಾರದೆ? Dress code ಕೋಟು ಹಾಕಿಕೊಂಡಿರುವವರು ಹೋಗಬೇಕು? ಅಲ್ಲಿಗೆ ಚಡ್ಡಿ ಹಾಕಿಕೊಂಡು ಹೋಗಬಾರದು ಇಂತಹದೆ ಡ್ರೆಸ್ ಹಾಕಿಕೊಂಡು ಹೋಗಬೇಕೆಂದು ಇದು ಯಾವ ಸಂವಿಧಾನದಲ್ಲಿ ಇದೆ? No, No.

ಅಧ್ಯಕ್ಷರು : ಸುಮ್ಮನೆ ಹಾಗೆಲ್ಲಾ ಹೇಳಬೇಡಿ.

ಶ್ರೀ ನೆ.ಲ. ನರೇಂದ್ರಬಾಬು : ಕೆಲವು ಕ್ಲಬ್‌ಗಳಲ್ಲಿ ಬ್ರಿಟಿಷರು ಹೋಗಿದ್ದರೂ, ಕೆಲವರಿಗೆ ಬುದ್ದಿ ಇನ್ನೂ ಹೋಗಿರುವುದಿಲ್ಲ.

ಶ್ರೀ ಸಿದ್ದರಾಮಯ್ಯ : Not enforceable under law, who are they? It is the against the provision the constitution. ಮಹಾತ್ಮ ಗಾಂಧೀಜಿಯವರು ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟರು. ಅವರು ಚೆಡ್ಡಿಯನ್ನು ಹಾಕಿಕೊಳ್ಳುತ್ತಿದ್ದರು. ಅವರು ಎಲ್ಲಿಗೂ ಹೋಗುತ್ತಿರಲಿಲ್ಲವೇ? ಇವರು dress code ಹಾಕಿಕೊಂಡು ನೀವು ಗಾಂಧೀಜಿಯವರಿಗೆ ಆಚೆ ಇರಬೇಕೆಂದು ಹೇಳಬೇಕಾಗಿತ್ತಾ, ಮಹಾತ್ಮ ಗಾಂಧೀಜಿಯವರು ಅದೇ ಡ್ರೆಸ್‌ನಲ್ಲಿ, round table conferenceಗೆ

ಹೋಗಿದ್ದರು. ಟೋಪಿಹಾಕಿಕೊಂಡು ಬರಬೇಡ, ಪ್ಯಾಂಟು ಹಾಕಿಕೊಂಡು ಬನ್ನಿ, ಸೂಟು ಹಾಕಿಕೊಂಡು ಬನ್ನಿ, ಚೆಡ್ಡಿ ಹಾಕಿಕೊಂಡು ಬನ್ನಿ, ನಿಕ್ಕರ್ ಹಾಕಿಕೊಂಡು ಬನ್ನಿ ಎಂದು ಹೇಳುವುದಕ್ಕೆ ಇವರು ಯಾರು? Who are they?

ಶ್ರೀ ನೆ.ಲ. ನರೇಂದ್ರಬಾಬು : ಬಿಕನಿ ಹಾಕಿಕೊಂಡರೆ ಬಿಡುತ್ತಾರೆ. ಹಂಚೆ ಉಟ್ಟುಕೊಂಡರೆ ಬಿಡುವುದಿಲ್ಲ. ಇದು ಯಾವ ಸಂಸ್ಕೃತಿ? ನಾವು ಯಾವ ದೇಶದಲ್ಲಿದ್ದೇವೆ? ಸರ್ದಾರ್ ವಲ್ಲಭಬಾಯಿ ಪಟೇಲ್‌ರವರು ಪಂಚೆ ಉಟ್ಟುಕೊಂಡಿರಲಿಲ್ಲವೇ, ಮಹಾತ್ಮ ಗಾಂಧೀಜಿಯವರು ಪಂಚೆಯನ್ನು ಉಟ್ಟುಕೊಂಡಿರಲಿಲ್ಲವೇ? ನಾವು ಯಾವ ದೇಶದಲ್ಲಿದ್ದೇವೆ.

ಶ್ರೀ ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರಿಗೆ, ಇವೆಲ್ಲವೂ 2008 ರ ಹಿಂದೆ ಇತ್ತಾ? ಈ ಕಾನೂನುಗಳು 2008ರ ನಂತರ ಬಂದಿದೆಯೇ?

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಸದಸ್ಯರಾದ ಶ್ರೀ ಕೆ.ಎಂ. ಶಿವಲಿಂಗೇಗೌಡರು ಪಂಚೆ ಹಾಕಿಕೊಂಡು ಬರುವುದಿಲ್ಲವೇ ?

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಡ್ರೆಸ್ ಕೋಡ್ ಎನ್ನುವಂತಹದ್ದು ಇದನ್ನು ನಮಗೆ ಬ್ರಿಟಿಷರು ಬಿಟ್ಟು ಹೋಗಿದ್ದಾರೆ.

ಅಧ್ಯಕ್ಷರು : ಈ ಬಗ್ಗೆ ಉತ್ತರವಿಲ್ಲದಿದ್ದರೆ ಚರ್ಚೆಯನ್ನು ಮಾಡುವುದು ಬೇಡ.

ಶ್ರೀ ಟಿ.ಬಿ. ಜಯಚಂದ್ರ : ಹಾಗಾದರೆ ಅದನ್ನು ನಾವು ಬದಲಾವಣೆ ಮಾಡಿಸಿ. ಹಿಂದೆ ಈ ಎಲ್ಲಾ ವಿಚಾರಗಳು ಪ್ರಸ್ತಾಪವಾಗಿತ್ತು.

ಅಧ್ಯಕ್ಷರು : 26ನೇ ತಾರೀಖಿನ ದಿವಸ ಉತ್ತರ ಹೇಳುವುದಕ್ಕೆ ತಯಾರಾಗಿ ಬನ್ನಿ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಸಹಕಾರ ಸಚಿವರು ಇದ್ದಾರೆ ತಾವು ಅವರಿಗೆ ಹೇಳಿ. ಇರುವಂತಹ ಬೈಲಾವನ್ನು ಬದಲಾವಣೆ ಮಾಡಿಸಬೇಕು. ಏತಕ್ಕಾಗಿ ಡ್ರೆಸ್ ಕೋಡ್ ಬೇಕು?

ಶ್ರೀ ಆರ್. ಅಶೋಕ್ : ಕಾಂಗ್ರೆಸ್ ಬಿಟ್ಟು ಹೋಗಿದ್ದು ಬ್ರಿಟಿಷರೇ ?

ಶ್ರೀ ಟಿ.ಬಿ. ಜಯಚಂದ್ರ : ಈ ಬಗ್ಗೆ ಅಮೂಲಾಗ್ರವಾಗಿ ಯಾರೂ ಕೂಡ ಪ್ರಶ್ನೆ ಮಾಡರಲಿಲ್ಲ. ನೀವು ಬಂದು ಕುಳಿತ ಮೇಲೆ ಅವರು ಇಂತಹ ಡ್ರೆಸ್ ಹಾಕಿಕೊಂಡು ಬನ್ನಿ ಎಂದು ಅವರು ಹೇಳುತ್ತಿದ್ದಾರೆ. ಈ ಬಗ್ಗೆ ತಾವು ಬೈಲಾವನ್ನು ಅಮೆಂಡ್‌ಮೆಂಟ್ ಮಾಡಿಸಿ. ನೀವು ಅವರಿಗೆ direction ಕೊಡಿ.

ಶ್ರೀ ಸಿದ್ದರಾಮಯ್ಯ : ಈಗಾಗಲೇ ಈ ಬಗ್ಗೆ ತಿದ್ದುಪಡಿಯಾಗಿದೆ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಶ್ರೀ ತಿಪ್ಪೇಸ್ವಾಮಿಯವರ ಪ್ರಶ್ನೆ ಸಂಖ್ಯೆ : 30 (31) ಮಾನ್ಯ ಕಂದಾಯ ಮಂತ್ರಿಗಳು ಉತ್ತರ ಹೇಳಬೇಕು.

ಅಧ್ಯಕ್ಷರು : ಇದಕ್ಕೆ ಮಾನ್ಯ ಉಪ ಮುಖ್ಯಮಂತ್ರಿಗಳು ನಾಳೆ ಉತ್ತರವನ್ನು ಕೊಡುತ್ತಾರೆ.

ಶ್ರೀ ಸಿದ್ದರಾಮಯ್ಯ: ಏನು ಸ್ವಾಮಿ, ಇದು ಮಕ್ಕಳಾಟ ಆಗಿಹೋಯಿತು.

ಅಧ್ಯಕ್ಷರು: ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸುವುದು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹರಗಳು ಮತ್ತು ಶಾಸನ ರಚನೆ, ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ : 24–7–2012ರ ಎರಡನೇ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ 115 ಪ್ರಶ್ನೆಗಳ ಪೈಕಿ 75 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು, ಈಗ ಚುನಾವಣಾ ಪ್ರಸ್ತಾಪ.